(ಇಂದು ದಿಃ 07-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

**ಮುಂದುವರೆದ ಪಾಟಿ ಸವಾಲು ಃ- 2 ನೇ ಪ್ರತಿವಾದಿ ಪರ ಶ್ರೀ. ವೈ.ಪಿ. ವಕೀಲರಿಂದ ಃ-**

ನನಗೆ ಹಲವು ಬ್ಯಾಂಕ್ ಅಕೌಂಟ್ ಗಳು ಇವೆ ಆದರೆ ಎಷ್ಟು ಅಕೌಂಟ್ ಗಳು ಇವೆ ಎಂದು ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ದಿಃ 24-05-2007 ರಂದು ಸಬ್ ರಿಜಿಸ್ಟರ್ ಕಛೇರಿ ಹತ್ತಿರ ನಗದಾಗಿ ಹಣ ಇಟ್ಟುಕೊಂಡು ಪ್ರತಿವಾದಿಗಳಿಗಾಗಿ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಳ್ಳಲು ಕಾಯುತ್ತಿರುವುದಾಗಿ ಈ ಹಿಂದೆ ಹೇಳಿದ್ದು ಆ ಹಣವನ್ನು ಯಾವ ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಬಂದಿದ್ದೆ ಎಂದು ಈಗ ನನಗೆ ನೆನಪಿಲ್ಲ. ನಿಪಿ 3 ರಲ್ಲಿ ಕೆಳಭಾಗದಲ್ಲಿ ಕೂಕ್ ಟೌನ್ ಎನ್ನುವುದರ ಮೇಲೆ ಇರುವ ಸಹಿ ನನ್ನದೆ ಆಗಿರುತ್ತದೆ. ಸಾಕ್ಷಿಯು ನಮ್ಮ ಮ್ಯಾನೇಜರ್ ನಿಪಿ 3 ಅನ್ನು ತಂದು ಕೊಟ್ಟಿದ್ದು ನಾನು ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ.

ದಿಃ 08-08-1995 ರ ಕ್ರಯದ ಕರಾರು ಪತ್ರದಲ್ಲಿ ಯಾವ ಷರತ್ತುಗಳನ್ನು ನಮೂದಿಸಲಾಗಿತ್ತು ಎಂದು ಈಗ ನೆನಪು ಇಲ್ಲ. ಈಗ ನಮ್ಮ ಮನೆಯಲ್ಲಿ ಎರಡು ಕಾರುಗಳು ಇವೆ. ನಮ್ಮ ಮನೆಯಲ್ಲಿ ನಮ್ಮ ತಂದೆಯ ಕಾಲದಿಂದಲೂ ಕಾರುಗಳು ಇರುತ್ತವೆ. ಶಿವಶಂಕರ್ ರೆಡ್ಡಿಯವರು ಖಾತೆ ಮಾಡಿಕೊಂಡ ಬಗ್ಗೆ ತಕರಾರು ಸಲ್ಲಿಸಿರುವುದಿಲ್ಲ. 2 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯಪತ್ರಕ್ಕೆ 1 ನೇ ಪ್ರತಿವಾದಿಯ ಎಷ್ಟು ಜನ ಕುಟುಂಬದ ಸದಸ್ಯರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ 08-08-1995 ರ ಕ್ರಯದ ಕರಾರು ಪತ್ರದಲ್ಲಿ 3 ತಿಂಗಳ ಒಳಗಾಗಿ ವ್ಯವಹಾರವನ್ನು ಮುಗಿಸಿಕೊಂಡು ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳುವ ಷರತ್ತು ಇತ್ತು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ದಿಃ 08-08-1995 ರ ಕ್ರಯದ ಕರಾರಿನಂತೆ 3 ತಿಂಗಳ ಒಳಗಾಗಿ ಷರತ್ತುಗಳನ್ನು ಪೂರೈಸಿರಲಿಲ್ಲ ಎಂದರೆ ನೆನಪಿಲ್ಲ. ಮುದ್ದಪ್ಪ ಬಿನ್ ವೀರಣ್ಣ ಆರಾಧ್ಯ ನನಗೆ ಗೊತ್ತು. ರಾಜಪ್ಪ ಬಿನ್ ಆರೋಗ್ಯಪ್ಪ ನನಗೆ ಯಾರು ಎಂದು ಈಗ ನೆನಪು ಬರುತ್ತಿಲ್ಲ. ದಿಃ 08-08-1995 ರ ಕ್ರಯದ ಕರಾರು ಪತ್ರದಂತೆ 3 ತಿಂಗಳ ಒಳಗಾಗಿ ನಮ್ಮ ಫ್ಯಾಕ್ಟರಿಯ ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲದೆ ಇದ್ದುದ್ದರಿಂದ ಹಣ ಕೊಟ್ಟು ಕ್ರಯ ಪತ್ರ ಮಾಡಿಸಿಕೊಳ್ಳಲು ಆಗದೇ ಇದ್ದುದ್ದರಿಂದ ಮೇಲ್ಕಂಡ ಮುದ್ದಪ್ಪ ಹಾಗೂ ರಾಜಪ್ಪ ಇವರುಗಳ ಸಮಕ್ಷಮ ಮಾತುಕತೆಯಾಗಿ ನಾನು 1 ನೇ ಪ್ರತಿವಾದಿಯಿಂದ ರೂ.1,25,000/- ಹಣವನ್ನು ನಗದಾಗಿ ಪಡೆದುಕೊಂಡು ಸದರಿ ದಿಃ 08-08-1995 ರ ಕ್ರಯದ ಕರಾರನ್ನು ಕ್ಯಾನ್ಸಲ್ ಮಾಡಿ ಅದನ್ನು ಹರಿದುಹಾಕಿರುತ್ತೇವೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು ಃ- 1 ನೇ ಪ್ರತಿವಾದಿ ಪರ ಶ್ರೀ. ಎನ್.ಪಿ. ವಕೀಲರಿಂದ ಃ-</u>**

ಕ್ರಯದ ಕರಾರಿನ ಮಾತುಕತೆ ನಮ್ಮ ಮನೆಯಲ್ಲಿ ಆಗಿತ್ತು. ಸದರಿ ಕ್ರಯದ ಕರಾರಿನ ಮಾತುಕತೆ ಕಾಲಕ್ಕೆ ರವೀಂದ್ರ, ರಾಜಪ್ಪ, ನಾಗಭೂಷಣ್ ರಾವ್, ರಿಸ್ವಾನ್ ಹಾಗೂ ರಾಜಪ್ಪನ ಕಡೆಯಿಂದ ಇನ್ನು ಕೆಲ ಜನ ಬಂದಿದ್ದರು. ಕ್ರಯದ ಕರಾರಿನ ಮಾತುಕತೆ ಕಾಲಕ್ಕೆ ಕೆಲವು

ದಾಖಲೆಗಳನ್ನು ನಾನು ಪರಿಶೀಲಿಸಿದ್ದೆನು ಆದರೆ ನಿಖರವಾಗಿ ಅವು ಯಾವ ದಾಖಲೆಗಳು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ರಾಜಪ್ಪ ಆಗಿನ ಪಹಣಿ ಪತ್ರಿಕೆಯಂತೆ ಬ್ಯಾಂಕಿನಲ್ಲಿ ಸಮಾರು ರೂ.2,28,000/- ಸಾಲ ಪಡೆದುಕೊಂಡಿರುವುದಾಗಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರದಲ್ಲಿ ಆ ಸಾಲವನ್ನು ಯಾರು ತೀರಿಸಬೇಕು ಎಂಬ ಬಗ್ಗೆ ನಮೂದಿಸಿದ ಬಗ್ಗೆ ಈಗ ನನಗೆ ನೆನಪಿಲ್ಲ. ದಾವಾ ಆಸ್ತಿ ರಾಜಪ್ಪನ ತಂದೆಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿ ರಾಜಪ್ಪನಿಗೆ ಆಂತೋಣಿ ರಾಜು, ಬಾಲರಾಜು, ಸುಶೀಲ, ಶಶಿಕಲಾ ಹಾಗೂ ಆರೋಗ್ಯ ಮೇರಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ನನಗೆ ಅವರ ಹೆಸರುಗಳು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ದಿ: 15-10-2004 ರ ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿ ರಾಜಪ್ಪ ತನ್ನ ಮಕ್ಕಳನ್ನು ಕರೆದುಕೊಂಡು ಬಂದು ಸಹಿ ಮಾಡಿಸುತ್ತೇನೆ ಎಂದು ಹೇಳಿದ್ದರು ಆದರೆ ಮಾಡಿಸಿರುವುದಿಲ್ಲ. ಕ್ರಯದ ಕರಾರು ಆದಾಗ ನನ್ನ ಬಳಿ ರೂ.15,00,000/- ಹಣ ಕ್ಯಾಶ್ ಹಾಗೂ ಬ್ಯಾಂಕಿನಲ್ಲಿ ಇತ್ತು. ಆ ರೀತಿ ನಮ್ಮ ಬಳಿ ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನಮ್ಮ ವಕೀಲರಿಗೆ ನಾವೇ ಹೇಳಿ ಬರೆಸಿರುತ್ತೇವೆ. ನಿಪಿ 5 ಅನ್ನು ಬರೆಯಲು ತಂದಿರುವ ಸ್ಟಾಂಪ್ ಪೇಪರ್ ಗಳ ಬಿಎ/2 ನಂ.287242 ಹಾಗೂ ಬಿಎ/2 ನಂ.287252 ಕ್ರಮವಾಗಿ ಇರುವುದಿಲ್ಲ ಎಂದರೆ ನನ್ನ ಮ್ಯಾನೇಜರ್ ತಂದಿದ್ದು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ 5 ರಲ್ಲಿ ಹಿಂದಿನ ಕ್ರಯದ ಕರಾರು ಪತ್ರ ಕಳೆದ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ 5 ಅನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ರಾಜಪ್ಪನ ಕಡೆಯವರು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿ ಹಾಗಿದ ಬಗ್ಗೆ ಈಗ ನನಗೆ ನೆನಪಿಲ್ಲ. ನಿಪಿ 5 ರಲ್ಲಿ ಹೇಳಿದಂತೆ ಯಾವುದೇ ಹಣ ವಾದಿ ರಾಜಪ್ಪನಿಗೆ ಸಂದಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆ ಹಾಕಿ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ః- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಪ್ರಧಾನಾ ಹಿ.ಸಿ.ಜೆ., ಆನೇಕಲ್.